# ಬೇಸಾಯವೆಂದರೆ

‘ಶರೀರವೆಂತೆಂಬುವ ಹೊಲವ ಹಸನು ಮಾಡಿ ಪರತತ್ವ ಬೆಳೆಯ ನೀವ್ ಬೆಳೆದುಣ್ಣಿರೋ’.

ಇದು ವೀರಶೈವ ಮಠಗಳಲ್ಲಿ ಸಾಮಾನ್ಯವಾಗಿ ಕೇಳುವ ಹಾಡು. ಶಿವಶರಣರನ್ನು ಸ್ಮರಿಸಿಕೊಳ್ಳುವ ಈ ಗೀತೆಯ ಮುಂದಿನ ಸಾಲುಗಳಾಗಿ ‘ಶಮೆದಮೆಯೆಂಬ ಎರಡು ಎತ್ತುಗಳನ್ನು ಹೂಡುವ ವ್ಯವಸಾಯವಾಗುತ್ತದೆ. ಮನಸ್ಸನ್ನು ನೇಗಿಲನ್ನಾಗಿ ಮಾಡಿ ಮಮಕಾರಗಳೆಂಬ ಕಳೆಗಳನ್ನು ಕೀಳುತ್ತಾ ಸಮತೆಯೆಂಬ ಗೊಬ್ಬರ ಹಾಕಿ ಗುರುವೆಂಬ ಬೀಜ ಬಿತ್ತಲಾಗುತ್ತದೆ. ಸಂಸ್ಕಾರವೆಂಬ ಮಳೆಯಲ್ಲಿ ಅರಿವೆಂಬ ಪೈರನ್ನು ಬೆಳೆಸಿ ದುರ್ಗುಣಗಳೆಂಬ ಕಳೆ ಕೀಳಲಾಗುತ್ತದೆ. ಮುಕ್ತಿಯೆಂಬ ಧಾನ್ಯವನ್ನು ಪಡೆದು ಆನಂದದಿಂದ ಉಂಡು ಗುರುಸಿದ್ದರ ಅಡಿಗಳಿಗೆ ಎರಗುವುದರಲ್ಲಿಯೇ ಮಾನವನ ಮುಕ್ತಿಯಿದೆ’ ಎಂದು ಈ ರಚನೆ ಹೇಳುತ್ತದೆ.

ತತ್ವಪದಕಾರರಾದ ಸರ್ಪಭೂಷಣ ಶಿವಯೋಗಿಗಳ ಮೇಲಿನ ರಚನೆಯಲ್ಲಿ, ಶರೀರವನ್ನೇ ಹೊಲವನ್ನಾಗಿ ಭಾವಿಸಿಕೊಂಡು ಏನನ್ನು ಬೆಳೆಯಬೇಕು, ಹೇಗೆ ಬೆಳೆಯಬೇಕು, ಈ ಬೆಳೆಯುವಿಕೆಯ ಅಂತಿಮ ಉದ್ದೇಶವೇನು ಮುಂತಾದವನ್ನು ನಿರ್ದೇಶಿಸಲಾಗಿದೆ. ಅಲ್ಲಮಪ್ರಭು ದೇಹವನ್ನು ನಾವು ಹೇಗೆ ಕಂಡುಕೊಳ್ಳಬೇಕು ಎನ್ನುವುದಕ್ಕೆ ವ್ಯವಸಾಯದ ರೂಪಕವನ್ನು ಬಳಸಿಕೊಳ್ಳುತ್ತಾನೆ. ‘ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ ಅಗೆದು ಕಳೆದೆನಯ್ಯಾ ಭ್ರಾಂತಿಯ ಬೇರ’ ಎನ್ನುತ್ತಾ ಸಂಸಾರವೆಂಬ ಹೆಂಟೆಯ ಒಡೆದು ಬ್ರಹ್ಮವೆನ್ನುವ ಬೀಜವ ಬಿತ್ತಿದ್ದೇನೆ ಎಂಬ ವಿಸ್ತರಣೆ ಮಾಡುತ್ತಾನೆ. ಅಲ್ಲಮ ಬಳಸುವ ಬಾವಿ, ರಾಟಾಳ, ಸಸಿ, ತೋಟ, ಬೇಲಿ ಇವೆಲ್ಲವೂ ಹೇಳುವುದು ಈ ಶರೀರವನ್ನು ನಾವು ವ್ಯವಸಾಯದ ಕ್ಷೇತ್ರವನ್ನಾಗಿ ನೋಡಬೇಕು.

ಶರಣರು, ದಾಸರು, ತತ್ವಪದಕಾರರು ದೇಹವನ್ನು ಎಲ್ಲ ಆಗುಹೋಗುಗಳ ಕ್ಷೇತ್ರವನ್ನಾಗಿಯೇ ಭಾವಿಸಿದರು. ಒಳಿತು ಕೆಡಕುಗಳ ಮೂಲವನ್ನು ದೇಹ ಹಾಗೂ ಮನಸ್ಸಿನ ಸದ್ಯದಲ್ಲಿಯೇ ವಿವರಿಸಲು ಪ್ರಯತ್ನಿಸಿದರು. ಮನಸ್ಸನ್ನು ಬಿತ್ತವಾಗಿ ಕಂಡ ಕಲ್ಪನೆ ಅದ್ಭುತವಾದುದು. ಕಡುದರ್ಪವೇರಿದ ಒಡಲೆಂಬ ಬಂಡಿಗೆ ಶರಣರ ನುಡಿಗಡಣವೇ ಕಡೆಗೀಲು ಎನ್ನುತ್ತಾರೆ ವಚನಕಾರರು. ಕೇವಲ ಹೊಲವಿದ್ದರೆ ಸಾಲದು. ಹೊಲವನ್ನು ಉಳುವ ರೈತನೂ, ಅವನ ಪಂಚೇಂದ್ರಿಯಗಳೂ ಸಹ ಅವನು ಹೇಳಿದ ಹಾಗೆ ಕೇಳುವ ಎತ್ತಿನಂತಿರಬೇಕು.ಈ ಪಾರಮಾರ್ಥಿಕ ವ್ಯವಸಾಯದ ಕಲ್ಪನೆಯೇ ಅದ್ಭುತವಾದುದು. ಇದು ತನ್ನನ್ನು ತಾನು ಅರಿಯುವ, ತನ್ನನ್ನು ತಾನು ಹತೋಟಿಯಲ್ಲಿ ಇಟ್ಟುಕೊಳ್ಳುವ ಕ್ರಿಯೆ.

ಒಕ್ಕಲಿಗನೊಬ್ಬ ತನ್ನ ಭೂಮಿಯಲ್ಲಿ ಒಂದಿಂಚೂ ಬಿಡದಂತೆ ಬಳಸಿಕೊಳ್ಳುವ ಕ್ರಮ ಅನನ್ಯವಾದುದು. ಯಾವ ಮಣ್ಣು, ನೀರಿನ ಸೌಲಭ್ಯ, ಯಾವ ಬೆಳೆ ಬೆಳೆದರೆ ತನ್ನ ಕುಟುಂಬ ನೆಮ್ಮದಿಯಾಗಿ ಉಣ್ಣಬಹುದು ಇದೆಲ್ಲವನ್ನೂ ಆತ ಯೋಚಿಸುತ್ತಾನೆ. ಹಿಂದೆ ವ್ಯಸಾಯವೆನ್ನುವುದು ಸಾಮೂಹಿಕ ಕ್ರಿಯೆಯಾಗಿತ್ತು. ಉಳುವುದು, ಬಿತ್ತುವುದು, ಕಳೆಕೀಳುವುದು, ಕೊಯ್ಲು ಮಾಡುವ ಕ್ರಿಯೆಯಲ್ಲಿ ಅವನು ಒಂಟಿಯಲ್ಲ. ಅವನೊಂದಿಗೆ ಕುಟುಂಬ, ಅಕ್ಕಪಕ್ಕದವರು, ಊರಿನವರು ಜೊತೆಯಾಗುತ್ತಿದ್ದರು.

ಈಗ ಆಧುನಿಕ ಸೌಲಭ್ಯಗಳು, ಹೆಚ್ಚು ಇಳುವರಿ ಕೊಡುವ ರಾಸಾಯನಿಕಗಳು ಅವನ ಪರಿಶ್ರಮವನ್ನು ಕಡಿಮೆ ಮಾಡಿವೆ ನಿಜ. ಆದರೆ ಅವನನ್ನು ಹೆಚ್ಚೆಚ್ಚು ಒಂಟಿತನಕ್ಕೆ ನೂಕುತ್ತಿದೆ. ಬೆಳೆದ ಮಕ್ಕಳು ನಗರದ ಕಡೆ ಮುಖ ಮಾಡುತ್ತಿದ್ದಾರೆ. ಒಂದುವೇಳೆ ಒಕ್ಕಲುತನದಲ್ಲಿ ಉಳಿದರೂ ಮೊದಲಿನಂತೆ ಮಳೆಬೆಳೆಗಳು ಅವರ ನೆರವಿಗೆ ಬರುತ್ತಿಲ್ಲ. ಬೆಳೆಗೆ ಸರಿಯಾದ ಮಾರಾಟ ವ್ಯವಸ್ಥೆಗಳಿಲ್ಲ. ನಗರದಲ್ಲಿ ಬದುಕುವ ಕನಸು ಕಾಣುವ ಗ್ರಾಮೀಣ ಹುಡುಗಿಯರು ಇವರನ್ನು ವರಿಸದ ಕಾರಣ ವಿವಾಹವೂ ಸಮಸ್ಯೆಯಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳ ಜೊತೆಗೆ ಆಳುವ ಪ್ರಭುತ್ವಗಳು ಹೊಸಹೊಸ ರೀತಿಯ ಕಾನೂನುಗಳನ್ನು ಜಾರಿಗೆ ತರುತ್ತಾ ಅವನನ್ನು ಉಸಿರುಗಟ್ಟಿಸುತ್ತಿವೆ. ಜಗತ್ತಿಗೆ ಅನ್ನವನ್ನು ಕೊಡುವ ರೈತನನ್ನು ಕುರಿತು ‘ಉಳುವಾ ಯೋಗಿಯ ನೋಡಲ್ಲಿ’ ಎಂದು ಹಾಡಿದ ನಾವು, ಇಂದು ಬೀದಿಗಿಳಿದು, ಬೀದಿಯಲ್ಲೇ ವಾಸ್ತವ್ಯ ಹೂಡಿ ಹೋರಾಟ ಮಾಡುತ್ತಿರುವ ಅವನಿಗೆ ನ್ಯಾಯವನ್ನು ಒದಗಿಸಲಾರರಾಗಿದ್ದೇವೆ.

ಹರಿಹರನ ಇಳೆಯಾಂಡ ಗುಡಿಮಾರನ ರಗಳೆಯಲ್ಲಿ ಬರುವ ಗುಡಿಮಾರ ಒಕ್ಕಲಿಗ ವೃತ್ತಿಯವನು. ಅವನ ಕಾಯಕ ಬೇಸಾಯ. ಸಮಚಿತ್ತವೆಂಬ ಭೂಮಿಯನು ಹಸನಾಗಿಸಿ ಶಂಕರನ ನೆನಪೆಂಬ ನೇಗಿಲನ್ನಿರಿಸಿ, ಅರಿಷಡ್ವರ್ಗಗಳನ್ನು ಹೂಡುವ ಎತ್ತನಾಗಿಸಿ ಚಂಚಲವಾದ ಮನಸ್ಸನ್ನು ಕಟ್ಟುವ ಹಗ್ಗವನ್ನಾಗಿಸಿ ಶಿವನಿಷ್ಠೆಯನ್ನು ಬೀಜವನ್ನಾಗಿಸಿ ಬೆಳೆಯ ಬೆಳೆಯುವೆ ಎನ್ನುತ್ತಾನೆ.

ಶಿವಶರಣರ ಕತೆಗಳಲ್ಲಿ ಬರುವ ಶಿವ ಕಾಯಕಕ್ಕೆ ಒಲಿದವನು. ಸೋಮಾರಿಗಳ ಹಾಗೆ ತಿಂದುಂಡು ನಲಿಯುತ್ತಾ ಭಕ್ತಿಯನ್ನು ತೋರುವವರನ್ನು ಅವನು ಮೆಚ್ಚನು. ಹೀಗಾಗಿ ಶಿವಾನುಭಾವವನ್ನು ಪಡೆಯುವುದು ಅಲ್ಪರಿಗೆ ಸಾಧ್ಯವಿಲ್ಲ. ದೇಹ ಮತ್ತು ಭಾವ ಮಾಗಿದ ಮೇಲೆಯೇ ಗುರುಕಾರುಣ್ಯ ದೊರೆಯುವುದು.

ಇಳೆಯಂಡ ಗುಡಿಮಾರ ಸತತವಾಗಿ ವ್ಯವಸಾಯ ಮಾಡುತ್ತಿದ್ದಾನೆ. ಎಲ್ಲರೂ ನೋಡುವುದು ಅವನು ಬಿತ್ತುವ, ಬೆಳೆಯುವ ವ್ಯವಸಾಯವನ್ನು ಮಾತ್ರ. ಆದರೆ ಅವನ ಅಂತರಂಗದ ಒಕ್ಕಲುತನ ಅವನಿಗೆ ಮಾತ್ರ ಗೊತ್ತು. ಗುಡಿಮಾರನ ಭಕ್ತಿ ಮಾಗಿದ ಮೇಲೆ ಶಿವ ಹಣ್ಣುಹಣ್ಣು ಮುದುಕನ ವೇಷ ಧರಿಸಿ ಅವನ ಮನೆಗೆ ಮಳೆ–ಚಳಿಯಲ್ಲಿ ಬರುತ್ತಾನೆ. ಅವನ ಚಳಿಯನ್ನು ಹೋಗಲಾಡಿಸಲು ಮನೆಯ ಜಂತೆಯ ಕಟ್ಟಿಗೆಗಳನ್ನು ಮುರಿಯುತ್ತಾನೆ. ಚಳಿಯ ನಂತರ ಶಿವನ ಹಸಿವಿನ ನಾಟಕ ಮುಂದುವರೆಯುತ್ತದೆ. ಮನೆಯಲ್ಲಿ ಧಾನ್ಯವಿಲ್ಲದ ಅವನು ಹೊಲದಲ್ಲಿ ಮೊಳಕೆ ಬಂದಿರುವ ಧಾನ್ಯಗಳನ್ನು ಆರಿಸಿ ತರಲೆಂದು ಮಗನನ್ನು ನಡುರಾತ್ರಿಯಲ್ಲಿ ಕಳಿಸುತ್ತಾನೆ. ಅಲ್ಲಿ ಅವನು ಹಾವು ಕಚ್ಚಿ ಸಾಯುತ್ತಾನೆ.

ಇಷ್ಟಕ್ಕೇ ಮುಗಿಯುವುದಿಲ್ಲ ಶಿವಕಾರುಣ್ಯದ ನಾಟಕ. ಹಸಿವು, ಹಸಿವೆಂದು ಕಾಡಲಾರಂಭಸಿದ ಮುದುಕನಿಗೆ ಆಹಾರ ನೀಡಲು ಗುಡಿಮಾರನ ಹೆಂಡತಿ ತಾನೇ ಸುರಿವ ಮಳೆಯಲ್ಲಿ ಹೊಲಕ್ಕೆ ಹೋಗಿ ಅಲ್ಲಿ ಮಡಿದ ಮಗನನ್ನು ಕಾಣುತ್ತಾಳೆ. ಶಿವಶರಣನ ಆರೋಗಣೆಗೆ ಭಂಗ ತರಬಾರದೆಂದು ಧಾನ್ಯಗಳನ್ನು ಆರಿಸಿ ತಂದು ಆಹಾರ ಸಿದ್ಧಪಡಿಸುತ್ತಾಳೆ. ಊಟಕ್ಕೆ ಬಡಿಸಿದಾಗ ಮಗನನ್ನು ಕರೆಯಿರೆಂದು ಮುದುಕ ಹಟಹಿಡಿಯುತ್ತಾನೆ. ನಿರ್ವಾಹವಿಲ್ಲದೆ ಗುಡಿಮಾರ ಮಗ ಸತ್ತ ಸುದ್ದಿ ತಿಳಿಸುತ್ತಾನೆ.

ಮಗನ ಸಾವನ್ನು ಎದೆಯಲ್ಲಿಟ್ಟುಕೊಂಡು ತನಗೆ ಉಣಬಡಿಸಿದ ದಂಪತಿಗಳ ಭಕ್ತಿಗೆ ಮೆಚ್ಚಿದ ಶಿವ ತನ್ನ ನಿಜರೂಪನ್ನು ತೋರಿಸುವುದಲ್ಲದೆ ಅವರಿಗೆ ಮುಕ್ತಿ ಕೊಟ್ಟು ತನ್ನೊಂದಿಗೆ ಕರೆದೊಯ್ಯುತ್ತಾನೆ.

ಯಾವುದೇ ವೃತ್ತಿಯಾದರೂ ನಿಷ್ಟೆಯಿಂದ ಮಾಡಬೇಕೆನ್ನುವುದು ಧರ್ಮ. ಆದರೆ ಈ ಧರ್ಮ ಪಾಲಿಸಲು, ಅವರವರ ವೃತ್ತಿಗೆ ಧಕ್ಕೆ ಬಾರದಂತೆ ಅನುಕೂಲ ಕಲ್ಪಿಸಿಕೊಡುವುದು ಸಮಾಜದ, ಸರ್ಕಾರದ ಕರ್ತವ್ಯ. ಎಲ್ಲಾ ಕಾಲದಲ್ಲಿ ಶಿವಸ್ವರೂಪಿ ದೈವಗಳು ನಮ್ಮನ್ನ ಪೊರೆಯುವಂತಿದ್ದರೆ ಎಷ್ಟು ಚೆನ್ನ.

■ **ಅಮೃತಮತಿ**

## ಮಾತೇ ಮುತ್ತು

- ಕಲೆ ಒಳಗಿನ ಸತ್ಯವನ್ನು ಬಿಂಬಿಸುತ್ತದೆಯೇ ಹೊರತು, ಹೊರಗಿನ ರೂಪವನ್ನು ಬಿಂಬಿಸಲು ಹೊರಟ ವಸ್ತುಸ್ಥಿತಿಯ ದರ್ಪಣವಲ್ಲ.
  —ಶಿವರಾಮ ಕಾರಂತ
- ಪ್ರಪಂಚದ ಸೌಂದರ್ಯಕ್ಕೆ ಎರಡು ಅಲುಗಿದೆ. ಒಂದು ನಗು, ಇನ್ನೊಂದು ಅಳು. ಎರಡರ ನಡುವೆ ಪ್ರಪಂಚ ಸಿಕ್ಕಿಕೊಂಡಿದೆ.
- —ವರ್ಜೀನಿಯ ವುಲ್ಫ್
- ಬಾಳಿ ಬದುಕಬೇಕೆನ್ನುವವರು ಅನಂತರದ ಕಡೆಗೆ ಲಕ್ಷ್ಯ ಕೊಟ್ಟಿರಬಾರದು.
  —ಲಿಯೊ ಟಾಲ್‌ಸ್ಟಾಯ್
- ಜಗದ ಜೀವವೆ ದೇವ, ಜಗವೇ ದೇವನ ದೇಹ, ಜೀವವಿರದಲ್ಲಿ ಜೀವನದ ಸೆಲೆಯೇ.
  —ಮಧುರ ಚೆನ್ನ
- ಸೇಡು ಎನ್ನುವುದು ಕ್ಷುದ್ರ ಮನಸ್ಸಿನ ಕೀಳುಮಟ್ಟದ ಆನಂದ.
  —ಜಾರ್ಜ್ ಹರ್ಬರ್ಟ್
- ಪ್ರಾಮಾಣಿಕತೆ ಸದಾ ಪರೀಕ್ಷೆಗೆ ಒಳಗಾಗುತ್ತದೆ.
  —ಜಾನ್ ಎಫ್. ಕೆನಡಿ
- ಶೀಲದ ಪರಮ ರಹಸ್ಯವೇ ಪ್ರೇಮ.
  —ಪಿ.ಬಿ. ಷೆಲ್ಲಿ